ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ 12ನೇ ಮೇ 1998ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು ಪೀಠವನ್ನು ಅಲಂಕರಿಸಿದ್ದರು.

(ಕಾಂಗ್ರೆಸ್ ಪಕ್ಷದ ಸದಸ್ಯರು ಧರಣಿ ಕುಳಿತಿದ್ದರು)

ಕೃಷ್ಣಾ ಮೇಲ್ದಂಡೆ ಯೋಜನೆಯ ಅವ್ಯವಹಾರದ ಬಗ್ಗೆ ಸದನದ ಸಮಿತಿ ವರದಿ ಒಪ್ಪಿಸಿರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇವಲ್ಲಿ): ಮಾನ್ಯ ಅಧ್ಯಕ್ಷರೇ ನಾವೆಲ್ಲಾ ನಿನ್ನೆಯ ದಿವಸ ಮಾನ್ಯ ಕಾಂಗ್ರೆಸ್ ಪಕ್ಷದ ಸದಸ್ಯರಲ್ಲಿ ಅಪೀಲ್ ಮಾಡಿಕೊಂಡಿದ್ದೆವು. ಸರ್ಕಾರದ ಪರವಾಗಿ ಮಾನ್ಯ ನಾಗೇಗೌಡರು ಅಪೀಲ್ ಮಾಡಿಕೊಂಡಿದ್ದಾರೆ. ಮಾನ್ಯ ಯಡಿಯೂರಪ್ಪನವರೂ ಸಹ ಅದೇ ರೀತಿಯ ಸೂಚನೆ ಕೊಟ್ಟರು.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಸಲಹೆ ಕೊಟ್ಟಂತೆ ನಮ್ಮ ಕಾಂಗ್ರೆಸ್‌ನ ಎಲ್ಲಾ ಸ್ನೇಹಿತರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಸಲಹೆಯಂತೆ ನಾವೆಲ್ಲಾ ಸ್ಥಳಕ್ಕೆ ಹೋಗಿ ತನಿಖೆ ಮಾಡೋಣ. ಎಲ್ಲಾ ಪಕ್ಷದ ಸದಸ್ಯರು ಅಲ್ಲಿ ಹೋಗಿ, ನಾವೆಲ್ಲಾ ಹೋಗಿ ನೋಡಿ ನಮಗೆ ಕನ್‌ವಿನ್ಸ್ ಆಗದಿದ್ದರೆ ನಾವೆಲ್ಲ ಸೇರಿ ಒಟ್ಟಾಗಿ ಸರ್ಕಾರವನ್ನು ತನಿಖೆಗೆ ಒತ್ತಾಯ ಮಾಡೋಣ. ಬಹುಶಃ ಉಳಿದ ಚರ್ಚೆಗೂ ಅನುಕೂಲವಾಗಬಹುದು. ನಾನು ನಮ್ಮ ಕಾಂಗ್ರೆಸ್ -ನಾಯಕರಲ್ಲಿ ವಿನಂತಿ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸಲಹೆ ಕೊಟ್ಟಂತೆ ನಾವೆಲ್ಲಾ ಹೋಗಿ ಬಂದ ಮೇಲೆ ನಂತರ ಕಾರ್ಯಕ್ರಮ ರೂಪಿಸೋಣ. ಈಗ ನಾನು ವಿನಂತಿ ಮಾಡುತ್ತೇನೆ ಅವರು ಧರಣಿ ವಾಪಸ್ಸು ತೆಗೆದುಕೊಳ್ಳಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಯಾರ್ಯಾರು ಹೋಗುವುದು, ಎಂಬುದನ್ನು ತಾವು ತೀರ್ಮಾನ ಮಾಡಬೇಕು.

ಅಧ್ಯಕ್ಷರು : ನಾವೆಲ್ಲಾ ಆಮೇಲೆ ಕುಳಿತು ಮಾತನಾಡೋಣ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಖಾತೆ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಮಾನ್ಯ ವಿರೋಧಪಕ್ಷದ ನಾಯಕರು ಬಿ ಜೆ ಪಿ